ಟಿ.ಎಂ. ಮಾನಪ್ಪ, ಶಿವಮೊಗ್ಗ
◆ ಗಗನಸಖಿಗೂ, ಪ್ರಾಣಸಖಿಗೂ ವ್ಯತ್ಯಾಸವೇನು?



ಮನುಜ ಕೆಳಗಿಳಿದಾಗ ಗಗನಸಖಿ ದೂರ; 'ಮೇಲೆ ಹೋದಾಗ' ಪ್ರಾಣಸಖಿ ದೂರ.

ಬಿ. ಚಂದ್ರೇಗೌಡ, ಬೆಂಗಳೂರು
◆ ಹೆಂಗಸರು ತಮ್ಮ ಹೆಸರಿನ ಮುಂದೆ ಗಂಡನ ಹೆಸರನ್ನು ಬರೆದುಕೊಳ್ಳುವ ಉದ್ದೇಶವೇನು?
ಚಂದ್ರೇಗೌಡ ಎಂ.ಎ., ಎಂದರೆ 'ಎಂ.ಎ.' ಅವರ ಸ್ವಾಧೀನವಾಗಿದೆ ಎಂದು. ಇದೂ ಹಾಗೆಯೇ.

ಯಶೋದಾ ಶಿವಣ್ಣ ಶೆಟ್ಟಿ, ಅಜೆಕಾರು
◆ ಟಿ.ವಿ.ಗೂ, ಮೊಬೈಲ್‌ಗೂ ಇರುವ ವ್ಯತ್ಯಾಸವೇನು?
ಟಿ.ವಿ. ವರ್ಣಾಲಂಕೃತ ಮೋಹಿನಿ; ಮೊಬೈಲ್ ಕರ್ಣಪಿಶಾಚಿ.

ನಗರ ಗುರುದೇವ್ ಭಂಡಾರ್ಕರ್, ಹೊಸನಗರ
◆ ಮದುವೆಯಾಗದ 'ಗಣೇಶ'ನು ಮದುವೆಯ ಕರೆಯೋಲೆಗಳಲ್ಲಿ ಮಿಂಚುವುದೇಕೆ?




ಇಡೀ ಮದುವೆಮನೆಯಲ್ಲಿ ಮಿಂಚುವುದೇ ಅವಿವಾಹಿತ ಗಣ ಎಂದು ಸೂಚಿಸಲು.

ಶ್ರೀನಿವಾಸ ಜಿ. ಪದಕಿ, ಮುಂಬಯಿ
◆ ಸಂಸಾರವೆಂದರೆ ಸತಿಪತಿಯರಲ್ಲಿ ಯಾರಾದರೂ ಬಾಗಲೇಬೇಕಂತೆ. ಯಾರು, ಎಷ್ಟು, ಏಕೆ ಬಾಗಬೇಕು?
ಇಬ್ಬರೂ; ದುರಭಿಮಾನ ಮುಳುಗುವಷ್ಟು; some ಸಾರ ಸವಿಯಲು.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ
◆ ಬ್ರಹ್ಮಚಾರಿಗಳೆಂದು ಹೇಳಿಕೊಳ್ಳುವ ಕೆಲವರು ಆಗಾಗ ಬೇಲಿ ಹಾರುವ ಬುದ್ಧಿ ಬೆಳೆಸಿಕೊಂಡಿರುವ ಕಾರಣವೇನು?
'ಅದು ಗೋಡೆ ಹಾರುವುದಲ್ಲ, ಮನೋನಿಗ್ರಹವನ್ನು ಪರೀಕ್ಷೆಗೆ ಒಡ್ಡಿಕೊಳ್ಳುವ ಪರಿ' ಎಂದನಾ ಬ್ರಹ್ಮಚಾರಿ.

ಪಿ.ಜೆ. ರಾಜ್, ಶಿವಮೊಗ್ಗ
◆ ಮಳೆಗೂ, ಚಳಿಗೂ ಇರುವ ಸಂಬಂಧವೇನು?
ಈಗಿನ ಸಂದರ್ಭದಲ್ಲಿ 'ಮೀಟೂ'ವೇ ಅವಳ ಕಣ್ಣೀರಿನ ಮಳೆಗೆ ಅವನ ಗಡಗಡ ನಡುಕ.

ಹೆಚ್.ವಿ. ಶ್ರೀಧರ್, ಬೆಂಗಳೂರು
◆ ಚೆನ್ನೈಗ್ಹೋದ ಎರಡ್ಮೂರ್ತಿಂಗ್ಳಲ್ಲೇ ತಮಿಳ್ಕಲಿಯೋ ಜನ ಬೆಂಗ್ಳೂರಿಗ್ಬಂದು ಇಪ್ಪತ್ತುಮೂವತ್ವರ್ಷವಾದ್ರೂ ಕನ್ನಡ ಕಲಿಯಲ್ಲ; ಯಾಕೆ?
ಅವರಿಗೆ ಛಾನ್ಸೇ ಕೊಡದೆ ಇವರೇ ಅವರ ಭಾಷೆ ಕಲಿತುಬಿಡುವುದರಿಂದ.

ಫ್ಲೇಟ್ ಪ್ರಕಾಶ್, ಹೊಸನಗರ
◆ ನವರಸದಲ್ಲಿ ಸಂಸಾರವೋ, ಸಂಸಾರದಲ್ಲಿ ನವರಸವೋ?
ಸಾಮಾನ್ಯ ಸಂಸಾರದಲ್ಲಿರುವುದು ಎರಡೇ ರಸ; ಸವಿರಸ, ಸವಿರಸ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
◆ ಆತ್ಮಕ್ಕೆ ಜಾತಿ ಎನ್ನುವುದು ಇದ್ದಿದ್ದರೆ ಏನಾಗುತ್ತಿತ್ತು ರಾಮ್?
ಸ್ಮಶಾನದಲ್ಲಿ ತನ್ನ ಜಾತಿಯ ದೇಹಕ್ಕಾಗಿಯೇ ಕಾಯುವ ಆತ್ಮಗಳ ಕ್ಯೂ ಬೆಳೆಯುತ್ತಿತ್ತು.

ರತ್ನಜ, ಮೈಸೂರು
◆ ನಾನು ಕಳುಹಿಸಿದ ಅನೇಕ ಪ್ರಶ್ನೆಗಳಿಗೆ ಇನ್ನೂ ಉತ್ತರ ದೊರೆತಿಲ್ಲವಲ್ಲ ರಾಂಜೀ...?
ಏಕ ಅಂಕಣಕ್ಕೆ ಅನೇಕ ಪ್ರಶ್ನೆಗಳು ಜ್ಯೂಸಿಳಿಯದ ಥ್ರೋಟನೋಳ್ ಬರ್ಗರಂ ತುರುಕಿದಂತೆ ಪೃಚ್ಛಕೇಶ.

ಪಿ.ಜೆ. ರಾಜ್, ಶಿವಮೊಗ್ಗ
◆ ಗಂಡಹೆಂಡತಿ ಜಗಳದಲ್ಲಿ ಕೂಸು ಬಡವಾಯ್ತು. ಪ್ರೇಮಿಗಳ ಜಗಳದಲ್ಲಿ ಯಾರು ಬಡವಾದರು?
ಗಿಫ್ಟ್ ಸೆಂಟರ್‌ನವರು, ಐಸ್‌ಕ್ರೀಂ ಪಾರ್ಲರ್‌ರವರು, ಪಾರ್ಕಿನಲ್ಲಿ ಲಂಚ ಪಡೆಯುತ್ತಿದ್ದ ಕಾವಲುಗಾರ....

## ಬಹುಮಾನಿತ ಪ್ರಶ್ನೆ

ಕೆ.ವಿ. ಗೋವಿಂದಾಚಾರಿ, ಮೈಸೂರು
◆ ಪುರುಷ ದರ್ಜಿಗಳು ಸ್ತ್ರೀಯರ ಉಡುಪು ಹೊಲಿಯುತ್ತಾರೆ, ಮಹಿಳಾ ದರ್ಜಿಗಳು ಗಂಡಸರ ಉಡುಪು ಹೊಲಿಯುವುದಿಲ್ಲ. ಏಕೆ?
ಹೊಲಿಸುವ ಯೋಚನೆಗಿಂತ ಹೊಲಸು ಯೋಚನೆಯ ಗಿರಾಕಿಗಳೇ ಹೆಚ್ಚಾಗುವುದರಿಂದ.

ಕುಮಾರ ಚಲವಾದಿ, ಹಾಸನ
◆ ತಾಯಿಗಿಂತ ದೇವರಿಲ್ಲ ಎನ್ನುತ್ತಾರೆ. ಹಾಗಾದರೆ ವೃದ್ಧಾಶ್ರಮಗಳು?
ಭಿನ್ನ ಮೂರ್ತಿಗಳನ್ನು ಇರಿಸುವ ಗೋಡೌನ್.

ವೀಣಾ ರವಿ ಪೈ, ಕಾಸರಕೋಡ
◆ ಬಸ್‌ಸ್ಟ್ಯಾಂಡಿನಲ್ಲೊಂದು ಬುಕ್ ಸ್ಟಾಲ್ ಏಕೆ?
ಪಕ್ಕದ ಸ್ಟಾಲ್‌ನಲ್ಲಿ ಬಜ್ಜಿ ತಿಂದವರಿಗೆ ಕೈ ಒರೆಸಿಕೊಳ್ಳಲು ಕಾಗದ ಬೇಕಲ್ಲ.

ವ. ಉಮೇಶ ಕಾರಂತ, ಮಂಗಳೂರು
◆ ಅಮ್ಮನಷ್ಟು ಅಪ್ಪ ಏಕೆ ಆಪ್ತ ಆಗುವುದಿಲ್ಲ?



ಅಮ್ಮನಿಗೆ ಸಿಕ್ಕಷ್ಟು ಅಡ್ವರ್ಟೈಸ್‌ಮೆಂಟ್ ಅಪ್ಪನಿಗೆ ಸಿಕ್ಕಿಲ್ಲದಿರುವುದರಿಂದ.

ಹಾಡ್ಯ ಬ. ಜಯಾನಂದ, ಮೈಸೂರು
◆ ಏನೂ ಗೊತ್ತಿಲ್ಲದಿದ್ದರೂ 'ಎಲ್ಲಾ ಗೊತ್ತು' ಎನ್ನುವವ ರಾಜಕಾರಣಿಯಂತೆ. ಗೊತ್ತಿದ್ದೂ 'ಗೊತ್ತಿಲ್ಲ' ಎನ್ನುವವ?
ಇಂದೋ, ನಾಳೆಯೋ 'ಗೊತ್ತಿರುವುದನ್ನು' ಒಳ್ಳೆಯ ಬೆಲೆಗೆ ಮಾರಿಕೊಳ್ಳುವವ.

ಮೋಹನರಾಜು ಎಸ್.ಎ., ಶಿವಮೊಗ್ಗ
◆ ಪರಗಳ್ಳರಿಗೂ, ಕರಗಳ್ಳರಿಗೂ ವ್ಯತ್ಯಾಸವೇನು?
ಒಬ್ಬ ಕದ್ದು ಸಂಪಾದಿಸುವ ಸರಹದ್ದು; ಇನ್ನೊಬ್ಬ ಸಂಪಾದಿಸಿ ಕದಿಯುವ ಹಣಹದ್ದು.

■ ರಾಮ್